3) ನರ್ಸಿಂಗ್ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು, ನರ್ಸಿಂಗ್ ಸಂಸ್ಥೆಗಳಲ್ಲಿ ಲಭ್ಯವಿರುವ ಮೂಲಭೂತ ಮತ್ತು ಕ್ಲಿನಿಕಲ್ ಸೌಕರ್ಯಗಳ ಬಗ್ಗೆ ಕಾಲಕಾಲಕ್ಕೆ ಪರಿವೀಕ್ಷಣೆ ಮಾಡುವುದು.

4) ಶುಶ್ರೂಷಕರ ತರಬೇತಿ ಕಾರ್ಯಕ್ರಮವನ್ನು ನಿಯಂತ್ರಿಸುವುದು.

5) ಅರ್ಹ ನರ್ಸಿಂಗ್ ವಿದ್ಯಾರ್ಥಿಗಳಿಗೆ ನರ್ಸಿಂಗ್ ವೃತ್ತಿಯನ್ನು ಮಾಡಲು ನೋಂದಣಿ ಪ್ರಮಾಣ ಪತ್ರವನ್ನು ನೀಡುವುದು.

6) ಬೇರೆ ರಾಜ್ಯ ಮತ್ತು ರಾಷ್ಟ್ರಗಳ ನರ್ಸಿಂಗ್ ನೊಂದಣಿ ಪ್ರಮಾಣ ಪತ್ರವನ್ನು ತಪಾಸಣೆ ಮಾಡುವುದು.

7) ರಾಜ್ಯದ ನೊಂದಾಯಿತ ವೃತ್ತಿನಿರತ ಶುಶ್ರೂಷಕರ ಸಾಮಾನ್ಯ ತಪಾಸಣೆ.

ಕರ್ನಾಟಕ ನರ್ಸಸ್ ಮಿಡ್‌ವೈವ್ಸ್ ಮತ್ತು ಹೆಲ್ತ್ ವಿಸಿಟರ್ಸ್ ಅಧಿನಿಯಮ 1961ರಡಿ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು ರಚಿಸಲಾಗಿದ್ದು, ಶಾಸನಬದ್ಧ ಸಂಸ್ಥೆಯಾಗಿರುತ್ತದೆ.

1309(1540) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿ.ಇ.ಟಿ.ಯಲ್ಲಿ ವೈದ್ಯಕೀಯ ಕೋರ್ಸಿಗಾಗಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಪ್ರಸ್ತುತ ಮೀಸಲಿರುವ ಒಂದು ಸೀಟನ್ನು ಎರಡು ಸೀಟುಗಳಿಗೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೆ;

ಆ) ದಂತ ವೈದ್ಯದಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಯಾವುದಾದರು ಮೀಸಲಾತಿ ಇದೆಯೆ; ಇಲ್ಲದಿದ್ದಲ್ಲಿ ಸರ್ಕಾರದಿಂದ ಯಾವುದಾದರೂ ಪ್ರಸ್ತಾವನೆ ಇದೆಯೇ;

ಇ) ಬಿ.ಎಸ್ಸಿ. ನರ್ಸಿಂಗ್ ಮತ್ತು ಜನರಲ್ ನರ್ಸಿಂಗ್ ಸೀಟುಗಳಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಮಿಸಲಾತಿ ಇದೆಯೆ; ಇಲ್ಲದಿದ್ದಲ್ಲಿ, ಈ ಸೌಲಭ್ಯವನ್ನು ನೀಡುವುದಕ್ಕೆ ಯಾವುದಾದರು ಪ್ರಸ್ತಾವನೆ ಇದೆಯೇ;

ಈ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಐ.ಐ.ಎಂ ನಿಂದ ಮಾನ್ಯತೆ ಪಡೆದ ಕರ್ನಾಟಕದಲ್ಲಿನ ವೈದ್ಯಕೀಯ ಕಾಲೇಜುಗಳೆಷ್ಟು ಕಾಲೇಜುಗಳ ಹೆಸರು ಮತ್ತು ವಿಳಾಸದ ವಿವರಗಳನ್ನು ಒದಗಿಸುವುದು;

ಉ) ವಿವಿಧ ವರ್ಗಗಳ ಅಡಿಯಲ್ಲಿ ಲಭ್ಯವಿರುವ ಸ್ನಾತಕೋತ್ತರ ಸೀಟುಗಳ ಸಂಖ್ಯೆ ಎಷ್ಟು;

ಊ) ರಾಜ್ಯದಲ್ಲಿರುವ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ಮತ್ತು ಹೊಸದಾಗಿ ಪ್ರಾರಂಭವಾಗುತ್ತಿರುವ ಕಾಲೇಜುಗಳ ಸಂಖ್ಯೆ ಎಷ್ಟು; ಆ ಕಾಲೇಜುಗಳ ಹೆಸರು ಮತ್ತು ವಿಳಾಸ ಹಾಗೂ ವಿವಿಧ ಪಂಗಡಗಳಲ್ಲಿ ಲಭ್ಯವಿರುವ ಸೀಟುಗಳ ಸಂಖ್ಯೆ ಒದಗಿಸುವುದು?

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿರುವುದಿಲ್ಲ.

ಆ) ಇಲ್ಲ.

ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿರುವುದಿಲ್ಲ.

ಇ) 2005–06ನೇ ಸಾಲಿನಲ್ಲಿ ಬಿ.ಎಸ್ಸಿ. ನರ್ಸಿಂಗ್ ಕೋರ್ಸಿನಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ 5 ಸೀಟುಗಳನ್ನು ಮೀಸಲಿರಿಸಲಾಗಿತ್ತು. ಜನರಲ್ ನರ್ಸಿಂಗ್ ಕೋರ್ಸಿನಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಯಾವುದೇ ಮೀಸಲಾತಿ ಇರುವುದಿಲ್ಲ. ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿರುವುದಿಲ್ಲ.

ಈ) ಒಟ್ಟು 33 ವೈದ್ಯಕೀಯ ಕಾಲೇಜುಗಳು (ಕೇವಲ ಸ್ನಾತಕೋತ್ತರ ಕೋರ್ಸುಗಳನ್ನು ಬೋಧಿಸುವ 5 ವೈದ್ಯಕೀಯ ಕಾಲೇಜುಗಳೂ ಒಳಗೊಂಡಂತೆ) ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಉ) ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

ಊ) ಸರ್ಕಾರಿ ವೈದ್ಯಕೀಯ ಕಾಲೇಜುಗಳು–04. 6 ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ ಹಾಗೂ ಈ ವರ್ಷ 2ಕ್ಕೆ ಅನುಮತಿ ನಿರೀಕ್ಷಿಸಲಾಗುತ್ತಿದೆ. ವಿವರಗಳನ್ನು ಅನುಬಂಧ–3ರಲ್ಲಿ ಒದಗಿಸಲಾಗಿದೆ. ಕೇಂದ್ರ ಸರ್ಕಾರ ಹಾಗೂ ಭಾರತೀಯ ವೈದ್ಯಕೀಯ ಪರಿಷತ್ತಿನ ಅನುಮತಿ ದೊರೆತ ನಂತರ ವಿವಿಧ ಪಂಗಡಗಳಿಗೆ ನಿಯಮಾನುಸಾರ ಸೀಟುಗಳನ್ನು ವಿಂಗಡಿಸಲಾಗುತ್ತದೆ.

ಅನುಬಂಧ–1

LIST OF MEDICAL COLLEGES RECOGNIZED BY RAJIV GANDHI UNIVERSITY OF HEALTH SCHIENCES, BANGALORE IN KARNATAKA.

(Annexure-A)

1	The Principal, Karnataka Institute of Medical, Science, Vidyanagar, Hubli-580001.	2	The Principal, JSS Medical College, Sri Shivarathreswara Nagar, Mysore-570015.

3	The Principal, J.J.M. Medical College, Davanagere-577004	4	The Principal, Government Medical College, Irwin Road, Mysore-570001.
5	Raja Rajeshwari Medical College, No. 14, Ramohalli, Cross, Kumbalgodu, Mysore Road, Bangalore-560074	6	The Principal, Bangalore Medical College, Fort, Bangalore-560002.
7	The Principal, Sri, Siddharatha Medical College, Agalkote, BH Road, Tumkur-572107.	8	The Principal, Dr. B.R. Ambedkar Medical College, K.G. Halli, Bangalore-560045.
9	The Principal, Sri BM Patil Medical College, Sholapur Road, Bijapur-586103	10	The Principal, Srinivasa Trust's Vydehi Institute of Medical Sciences & Research Centre, Whitefied, Bangalore-560066.
11	The Principal, Vijayanagar Institute of Medical, Sciences, Contonment, Bellary-583104.	12	The Principal, Ms Ramaiah Medical College, M.S. Ramaiah Nagar, MSRIT, Post, Bangalore-560054.
13	The Principal, Fr. Muller's Medical College, Fr. Muller's Road, Kankanady, Mangalore-575002.	14	The Principal, J.N. Medical College, Nehru Nagar, Belgaum-590010.

15 The Principal,
Al-Ameen Medical College,
Athani Road,
Bijapur-586108.

16 The Principal,
Sri Devraj Urs Medical College,
Tamaka,
Kolar-563101.

17 The Principal,
K.S. Hedge Medical Academy,
(Nitte Education Trust),
University Road,
Derakatte,
Mangalore-574160

18 The Principal,
KVG Medical College,
KVG Vidyanagar,
Kurunjibagh,
Sullia-574327, D.K.

19 The Principal,
Navodaya Medical College,
No.6-2-139/5, Mantralaya Road,
Raichur-584102

20 The Principal,
Khaja Banda Nawaz Rural Institute of Medical Sciences,
Rauza Bazar, Gulbarga-585104.

21 The Principal,
SDM Medical College,
Manjushri Nagar, Sanur,
Dharwad-580009.

22 The Principal,
Yanepoya Medical College,
Devalakatter,
Mangalore-575018.

23 The Principal,
M.R. Medical College,
Sedam Road, Gulbarga-585105.

24 The Principal,
A.J. Institute of Medical Science, Kuntikana,
Mangalore-575004.

25 The Principal,
BVV Sangha's S. Nijalingappa Medical College & Hanagal Shree Kumareshwar Hospital & Research Centre,
Bagalkot-578101.

26 The Principal,
St. Jonh's Medical College,
Sarjapur Road,
Bangalore-560034.

27 The Principal,
Kampegowda Institute of Medical Sciences, K.R. Road, V.V. Puram,
Bangalore-560004.

28 The Principal,
Adichunchanagiri Institute of Medical Sciences, B.G. Nagar-571448,
Nagamangala Taluk,
Mandya District.

LIST OF MEDICAL COLLEGES RUNNING PG COURSES ONLY

1 The Commandant/Principal,
Command Hospital Air Force,
Airport Road, Post Agram,
Bangalore-560007.

2 The Director,
Jayadeva Institute of Cardiology,
Bannerghatta Road,
Jayanagar 9th Block,
Bangalore-69.

3 The Commandant/Principal,
Institute of Aerospace Medicine,
Vimanapura Post, Airpost Road,
Bangalore-560017.

4 The Director,
Kidwai Memorial Institute of Oncology, Hosur Road,
Bangalore-560029.

5 The Director,
Indira Gandhi Institute of Child Health,
South Hospital Complex,
Dharmaram College Post,
Bangalore-560029.

ಅನುಬಂಧ–II

2006–07ನೇ ಸಾಲಿನ ಸರ್ಕಾರಿ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ಸೀಟುಗಳ ವಿವರ

ವೈದ್ಯಕೀಯ ಕಾಲೇಜುಗಳು

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ವಿಷಯ	ಒಟ್ಟು ಸೀಟುಗಳು	ಆಲ್ ಇಂಡಿಯಾ ಕೋಟಾ	ಅಂಗವಿಕಲರ ಮೀಸಲು ಸೀಟುಗಳು	ಸಾಮಾನ್ಯ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ವರ್ಗ 1	2ಎ	2ಬಿ	3ಎ	3ಬಿ
1	2	3	4	5	6	7	8	9	10	11	12	13	14
1	ಬೆಂಗಳೂರು ವೈದ್ಯಕೀಯ ವಿದ್ಯಾಲಯ	ಡಿಗ್ರಿ	75	37	01	25	05	01	01	02	01	01	01
		ಡಿಪ್ಲೋಮೊ	71	35	01	21	06	02	01	04	–	01	–
2	ಮೈಸೂರು ವೈದ್ಯಕೀಯ ವಿದ್ಯಾಲಯ	ಡಿಗ್ರಿ	47	24	01	15	03	–	–	–	03	–	01
		ಡಿಪ್ಲೋಮೊ	39	19	01	10	03	01	01	02	01	–	01
3	ಕಿಮ್ಸ್ ಹುಬ್ಬಳ್ಳಿ	ಡಿಗ್ರಿ	55	27	01	12	06	01	01	04	02	01	–
		ಡಿಪ್ಲೋಮೊ	48	24	01	14	05	–	01	02	01	–	–
4	ವಿಮ್ಸ್ ಬಳ್ಳಾರಿ	ಡಿಗ್ರಿ	30	15	–	07	01	02	01	02	–	01	01
		ಡಿಪ್ಲೋಮೊ	22	11	–	07	–	–	–	02	–	01	01
	ಒಟ್ಟು		387	192	06	111	29	07	06	18	08	05	05

ದಂತ ವೈದ್ಯಕೀಯ ಕಾಲೇಜು

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಒಟ್ಟು ಡಿಗ್ರಿ ಸೀಟುಗಳು	ಆಲ್ ಇಂಡಿಯಾ ಕೋಟಾ	ಅಂಗವಿಕಲರ ಮೀಸಲು ಸೀಟುಗಳು	ಸಾಮಾನ್ಯ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ವರ್ಗ 1	2ಎ	2ಬಿ	3ಎ	3ಬಿ
1	2	3	4	5	6	7	8	9	10	11	12	13
1	ಸರ್ಕಾರಿ ದಂತ ವೈದ್ಯಕೀಯ ವಿದ್ಯಾಲಯ	21	19	–	06	02	–	01	01	–	–	01

ಅನುಬಂಧ–III

LIST OF GOVERNMENT MEDICAL COLLEGES IN KARNATAKA

(Annexure-B)

		Total UG Seats			Total UG Seats
1	The Principal, Karnataka Institute of Medical Sciences, Vidyanagar, Hubli-580001.	100	2	The Principal, Government Medical College, Irwin Road, Mysore-570001.	100
3	The Principal, Vijaynagar Institute of Medical Sciences, Contonment, Bellary-583104	100	4	The Principal, Bangalore Medical College, Fort, Bangalore-560002.	150

LIST OF NEW GOVERNMENT MEDICAL COLLEGES COMING UP IN KARNATAKA

(Annexure-C)

1	Mandya Institute of Medical Science, District Hospital Campus, Mandya.	2	Belgaum Institute of Medical Sciences, District Hospital Campus, Belgaum.
3	Bidar Institute of Medical Sciences, District Hospital Campus, Bidar.	4	Raichur Institute of Medical Sciences, District Hospital Campus, Raichur.
5	Hassan Institute of Medical Sciences, District Hospital Campus, Hassan	6	Shimoga Institute of Medical Sciences, District Hospital Campus, Shimoga.

NEW PRIVATE MEDICAL COLLEGE COMING UP IN KARNATAKA

1 Subbaiah Institute of Medical Sciences,
Subbaiah Hospital Complex,
Jail Road, Shimoga-577201.

1310(689) ಶ್ರೀ ಕ್ಯಾತಸಂದ್ರ, ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿ ಚಿಕುಂಗುನ್ಯ ವ್ಯಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚಿಕೂನ್ ಗುನ್ಯಾ ಕಾಯಿಲೆ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸರ್ಕಾರವು ಈ ರೋಗದ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1) ಜ್ವರ ಪ್ರಕರಣಗಳು ತೀವ್ರವಾಗಿ ವರದಿಯಾದ ಪ್ರದೇಶಗಳಲ್ಲಿ ಸ್ಥಳೀಯವಾಗಿ ಚಿಕಿತ್ಸಾಲಗಳನ್ನು ತೆರೆದು ವೈದ್ಯರುಗಳನ್ನು ನಿಯೋಜಿಸಿ ದಿನದ 24 ಗಂಟೆಯೂ ತ್ವರಿತ ಚಿಕಿತ್ಸೆ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆ. ತುರ್ತು ಸಂದರ್ಭಗಳಲ್ಲಿ ರೋಗಿಗಳನ್ನು ದೊಡ್ಡ ಆಸ್ಪತ್ರೆಗಳಿಗೆ ಸಾಗಿಸಲು ಅನುಕೂಲವಾಗುವಂತೆ ಆಂಬುಲೆನ್ಸ್ ವಾಹನ ಸೌಕರ್ಯವನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

2) ಜನರು ಆತಂಕಕ್ಕೆ ಒಳಗಾಗದಂತೆ ಸೂಕ್ತ ಆರೋಗ್ಯ ಶಿಕ್ಷಣದ ಮೂಲಕ ಅವರು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಎಲ್ಲಾ ರೀತಿಯ ಮಾಹಿತಿ ನೀಡಿ ಇವುಗಳನ್ನು ತಪ್ಪದೇ ಪಾಲಿಸುವಂತೆ ಅವರ ಮನವೊಲಿಸಿ ಸ್ಥಳೀಯ ಮುಖಂಡರು ಹಾಗೂ ಸ್ವಯಂ ಸೇವಾ ಸಂಸ್ಥೆಗಳು, ಸಮಾಜ ಸೇವಕರುಗಳನ್ನೊಳಗೊಂಡ ಸಮುದಾಯದ ಸಕ್ರಿಯ ಭಾಗ ವಹಿಸುವಿಕೆಗಾಗಿ ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ಚುರುಕುಗೊಳಿಸಿದೆ.

3) ಸ್ವಯಂ ರಕ್ಷಣಾ ವಿಧಾನಗಳ ಅನುಸರಣೆ, ಪರಿಸರ ನೈರ್ಮಲ್ಯ, ನೀರು ಶೇಖರಣಾ ವಿಧಾನಗಳಲ್ಲಿ ಸೂಕ್ತ ಮಾರ್ಪಾಡುಗಳು, ಕುಡಿಯುವ ನೀರಿನ ಸೂಕ್ತ